ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ

ಆಳಂದ

ಸಿ.ಸಿ, ನಂಬರ 2175/2022 ಸಿ.ಡಬ್ಲೂ.1 ಪಿ.ಡಬ್ಲೂ.1

| | |
|---|---|
| ಹೆಸರು | ನೀಲಕಂಠ |
| ತಂದೆ | ರೇಣುಕಾಪ್ರಸಾದ |
| ವಯಸ್ಸು | 33 ವರ್ಷ |
| ಉದ್ಯೋಗ | ಖಾಸಗಿ ಕೆಲಸ |
| ವಾಸಸ್ಥಳ | ಪಡಸಾವಳಗಿ |

ದಿನಾಂಕ 23-01-2026

ಸತ್ಯ ಪ್ರತಿಜ್ಞೆಯ ಮೇರೆಗೆ

ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ವಕೀಲರಿಂದ:

ಆರೋಪಿತರು ನನ್ನ ಅಣ್ಣ ತಮ್ಮಕಿ ಆಗಬೇಕು. ಚಾಸಾ-4 ಮತ್ತು 5 ನನ್ನ ತಂದೆ ತಾಯಿ, ಚಾಸಾ 6 ನನ್ನ ಅಕ್ಕನ ಮಗ, ಚಾಸಾ 2, 3 ಮತ್ತು 7 ಪರಿಚಯ ಇರುತ್ತಾರೆ.

ದಿಃ 12-02-2022 ರಂದು ಸಾ. 5.00 ಗಂಟೆಗೆ ನಾನು, ಚಾಸಾ 4 ಮತ್ತು 5, ಚಾಸಾ 6 ಸೇರಿಕೊಂಡು ನಮ್ಮ ಹೊಲದಲ್ಲಿ ಕಬ್ಬಿಗೆ ನೀರು ಬಿಡುವಾಗ ಆರೋಪಿತರು ನಮ್ಮ ಜಮೀನಿನಲ್ಲಿ ಅತಿಕ್ರಮಣ ಮಾಡಿ 1ನೇ ಆರೋಪಿಯು ಏ ರಂಡಿ ಮಗನೇ ಗಾಂಡು ಸೂಳೇ ಮಗನೇ ಎಂದು ಬೈದು ಕಲ್ಲಿನಿಂದ ಬಾಯಿ ಮೇಲೆ ಹೊಡೆದು ರಕ್ತ ಗಾಯ ಮಾಡಿರುತ್ತಾರೆ ಮತ್ತು ಕಟ್ಟಿಗೆಯಿಂದ ಹೊಡೆದಿರುತ್ತಾರೆ. 2ನೇ ಆರೋಪಿಯು ನನಗೆ ಹೊಡೆದು ಬೆನ್ನಿನ ಚೂರಿ ಕೆಳಗೆ ಬಿಳಿಸಿ ಕಟ್ಟಿಗೆಯಿಂದ ಕೈ ಮತ್ತು ಬೆನ್ನ ಮೇಲೆ ಹೊಡೆದು ಗುಪ್ತ ಗಾಯ ಮಾಡಿರುತ್ತಾರೆ. 3 ನೇ ಆರೋಪಿಯು ಬಂದು ಕಬ್ಬಿನಲ್ಲಿ ನೂಕಿಸಿ ಬೆನ್ನ ಮೇಲೆ ಒದ್ದು ಗುಪ್ತ ಗಾಯ ಮಾಡಿರುತ್ತಾರೆ. 4ನೇ ಆರೋಪಿಯು ಕಟ್ಟಿಗೆಯಿಂದ ಬೆನ್ನ ಮೇಲೆ ಹೊಡೆದಿರುತ್ತಾರೆ ಮತ್ತು ಎಡಗೈ ಹೆಬ್ಬರಳ ಮಧ್ಯದಲ್ಲಿ ಹೊಡೆದ ಕಾರಣ ನನಗೆ ಗಾಯ ಆಗಿ ಹೊಲಿಗೆಗಳು ಬಿದ್ದಿರುತ್ತವೆ. ಆಗ ಚಾಸಾ 4 ರವರು ಬಿಡಿಸಲು ಬಂದಾಗ 1ನೇ ಆರೋಪಿಯು ಚಾಸಾ 4 ರವರಿಗೆ ಕಟ್ಟಿಗೆಯಿಂದ ಬೆನ್ನ ಮೇಲೆ ಹೊಡೆದಿರುತ್ತಾರೆ. 2ನೇ ಆರೋಪಿಯು ಸಹ ಚಾಸಾ 4 ರವರಿಗೂ ಸಹ ಹೊಡೆದಿರುತ್ತಾರೆ. 4 ನೇ ಆರೋಪಿಯು ಚಾಸಾ 4 ರವರ ಬೆರಳು ಮುರಿದಿರುತ್ತಾರೆ. ಚಾಸಾ 5 ರವರು ಬಿಡಿಸಲು ಬಂದಾಗ 1ನೇ ಆರೋಪಿಯು ಏ ರಂಡಿ ಅಂತಾ ಬೈದು ಸೀರೆ ಹಿಡಿದು ನುಕಿಸಿಕೊಟ್ಟು ಗುಪ್ತ ಗಾಯ ಮಾಡಿರುತ್ತಾರೆ. ಚಾಸಾ 6 ರವರು ಬಿಡಿಸಲು ಬಂದಾಗ 1ನೇ ಆರೋಪಿಯು ಏ ರಂಡಿ ಮಗನೇ ಬೈದು ಒಣಗಿದ ಕಬ್ಬಿನಿಂದ ಮತ್ತು ಕಲ್ಲಿನಿಂದ ಹೊಡೆದು ಗುಪ್ತ ಗಾಯ ಮಾಡಿರುತ್ತಾರೆ. ನಂತರ ಎಲ್ಲಾ ಆರೋಪಿತರು ಸೇರಿಕೊಂಡು ನಿಮ್ಮನ್ನು ಜೀವ ಸಹಿತ ಬಿಡುವುದಿಲ್ಲ ಅಂತಾ ಜೀವ ಬೆದರಿಕೆ ಹಾಕಿರುತ್ತಾರೆ. ನಂತರ ನಾನು 112 ಸಂಖ್ಯೆಗೆ ಕರೆ ಮಾಡಿದಾಗ ಪೋಲಿಸರು ಬಂದು ಜಗಳ ಬಿಡಿಸಿರುತ್ತಾರೆ. ನಂತರ ಆ್ಯಂಬುಲೆನ್ಸ ಮುಖಾಂತರ

ಕಲಬುರಗಿಯ ಮಣ್ಣೂರು ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದಿರುತ್ತೇವೆ. ದಿಃ 17-02-2022 ರಂದು ಠಾಣೆಗೆ ಹೋಗಿ ದೂರನ್ನು ಸಲ್ಲಿಸಿರುತ್ತೇನೆ. ಎರಡು ದಿನಗಳ ಬಳಿಕ ಪೋಲಿಸರು ಘಟನಾ ಸ್ಥಳಕ್ಕೆ ಬಂದು ನಾನು ತೋರಿಸಿದ ಸ್ಥಳದಲ್ಲಿ ಪಂಚನಾಮೆಯನ್ನು ಮಾಡಿ ಕಟ್ಟಿಗೆ ಮತ್ತು ಕಲ್ಲನ್ನು ಜಪ್ತಿ ಮಾಡಿರುತ್ತಾರೆ. ಸಾಕ್ಷಿಯು ಮುಂದುವರೆದು ನಾನು ದೂರಿನ ಜೊತೆಗೆ ಭಾವಚಿತ್ರಗಳನ್ನು ಮತ್ತು ವಿಡಿಯೋ ಇರುವ ಪೆನಡ್ರೈವ್ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ.

ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು ದೂರನ್ನು ನಿಪಿ-1 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಎರಡು ಕಲ್ಲುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ಮು.ಮಾ. 1 ಅಂತಾ ಗುರುತಿಸಲಾಯಿತು.

**<u>(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೇಳಿರುತ್ತಾರೆ ನೀಡಲಾಯಿತು.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಸಾ.ಓ.ಹೇ.ಕೇ.ಸ.ಇ.ಅದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ.ಎಫ್.ಸಿ ಆಳಂದ